ಶ್ರೀ ವಿ ಜ ಯೀ ೦ ದ್ರ ತೀ ರ್ಥ ಗು ರು ಭ್ಯೋ ನ ಮಃ

ಭಕ್ತಾನಾಂ ಮಾನಸಾಂಭೋಜ ಭಾನವೇ ಕಾಮಧೇನವೇ ।
ನಮತಾಂ ಕಲ್ಪತರವೇ ಜಯೀಂದ್ರ ಗುರವೇ ನಮಃ ॥

ಭಕ್ತರ ಮನಸ್ಸೆಂಬ ಕಮಲಗಳನ್ನು ಅರಳಿಸುವ ಸೂರ್ಯ- ನಂತಿರುವ, ನಮಿಸುವವರಿಗೆ ಕಾಮಧೇನುವೂ, ಕಲ್ಪವೃಕ್ಷವೂ ಆದ ವಿಜಯೀಂದ್ರತೀರ್ಥರಿಗೆ ನಮನಗಳು.

( ಆ ರಾ ಧ ನೆ : ಜೇ ಷ್ಠ ಮಾ ಸ ಕೃ ಷ್ಣ ಪ ಕ್ಷ ತ್ರ ಯೋ ದ ಶಿ )




ರಾ ಗ - ಶ ೦ ಕ ರಾ ಭ ರ ಣ : ತಾ ಳ - ಆ ದಿ ತಾ ಳ

ವಿಜಯೀಂದ್ರ ಮುನೀಂದ್ರರೆಂಬಾಶ್ಚರ್ಯದ
ಗಜೇಂದ್ರ ಬಂದದೆ ಸುಜನರು ನೋಡ ಬನ್ನಿ ।ಪ।

ಕಲುಷವೆಂಬ ಪಂಕವನೀಡ್ಯಾಡಿ । ವಿ-
ಮಲ ಹರಿಪದ ತೀರ್ಥದ ಜಲಪಾನ ಮಾಡಿ
ಸಲೆ ಗುರುಮಧ್ವ ಮತಾಂಬುಧಿಯೊಳು
ನಲಿನಲಿದು ಕುಣಿದಾಡುತಲೀ ।೧।

ರಮೇಶನ ಧ್ಯಾನವೆಂಬ ಮದವೇರಿ

ಮಮತೆಯೆಂಬ ಕದಳಿ ಕಿತ್ತೀಡಾಡಿ
ವಿಮಲ ಶ್ರೀಹರಿಪದರಜ ಶಿರದಿ ಧರಿಸಿ
ಕುಮತಗಳೆಂಬ ತರುಗಳ ಮುರಿಯುತಲೀ ॥ ೨ ॥

ಗುರು ಸುರೇಂದ್ರತೀರಥರೆಂಬ
ವರಮಾವಟಿಗನ ಆಜ್ಞೆಯೊಳಿದ್ದು
ಗುರುಪುರಂದರವಿಟ್ಠಲನ ಭಕ್ತಿಯೆಂಬ
ಸರಪಣಿಯೊಳು ನಲಿನಲಿದಾಡುತಲೀ ॥ ೩ ॥

ರಾ ಗ – ಹ ಂ ಸ ಧ್ವ ನಿ : ತಾ ಳ – ಆ ದಿ ತಾ ಳ

ವಿಜಯೀಂದ್ರ ಯತಿಯ ನಾ ಕಂಡೆ । ಮುದಗೊಂಡೆ ॥ ಪ ॥

ವಿಜಯ ಡಂಗುರ ಹೊಯಿಸಿ ಗಜವೇರಿ ಬರುತಿಪ್ಪ ॥ ಅ ಪ ॥

ನಿಜದಿ ಲಿಂಗಣ್ಣನ ಗೆಲಿದು । ಮಠವನು ಪಡೆದು ।
ಸುಜನರ ಭಯ ಪರಿಹರಿಸುತ ಮೆರೆಯುವ ॥ ೧ ॥

ಹರಿಯೇ ಪರನೆಂಬುವ ಸರ್ವ ಶಾಸ್ತ್ರ ಕೋವಿದನ
ಧರಣೀಶನುತ ವ್ಯಾಸಮುನಿಯ ವಿದ್ಯಾಸುತನ ॥ ೨ ॥

ಸುಖಮುನಿಯಾಸ್ಥಾನ ರಾಜನ ವರತೇಜನ
ಅಕಳಂಕ ಮಹಿಮಾಸಿರಿ ಸುರೇಂದ್ರನ ಕುವರನ ॥ ೩ ॥

ಚಾಷಷ್ಟಿ ಕಲೆಗಳರಿತವನ ಮಾಯಿಭೀಕರನ
ಶ್ರೀಶ ಗುರುಪುರಂದರವಿಟ್ಠಲನ್ನ ಭಜಿಪನ್ನ ॥ ೪ ॥

Contributed by Sri.B.Ramanatha Bangalore